9-12-2014

(8)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ವಿಷಯ:**

ವೈಜ್ಞಾನಿಕ-ವೈಚಾರಿಕ ದೃಷ್ಟಿಕೋನ ಸೇವೆಯಲ್ಲಿ ಶ್ರದ್ಧೆ ಸಾಹಿತ್ಯ ರಂಗಭೂಮಿ, ಸಂಗೀತ ಶಿಕ್ಷಣ ಹೀಗೆ ಎಲ್ಲ ವಲಯಗಳಲ್ಲೂ ಅಪಾರ ಅಸಕ್ತಿ ಹೊಂದಿದ್ದ ದಿವಗಂತ ಎಂ.ಪಿ.ಪ್ರಕಾಶ್ ಅವರು ರಾಜಕೀಯವಾಗಿ ಉನ್ನತ ಹುದ್ದೆ ಅಲಂಕರಿಸಿದ್ದರೂ ಸಹಜತೆಯನ್ನು ಹೊಂದಿದವರಾಗಿದ್ದರು. 1967 ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶಿಸಿದರು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಪ್ರಾರಂಭಕ್ಕೆ ಅಡಿಗಲ್ಲು ಹಾಕಿದ ನಂತರ. ಈ ವಿಷಯಕ್ಕೆ, ಸರ್ಕಾರದ ಮಟ್ಟದಲ್ಲಿ ಜೀವ ತುಂಬಿ ಖಾಸಗಿ ವಲಯದಲ್ಲಿ ಉದ್ದೇಶಿತ ಉಕ್ಕು ಕಾರ್ಖಾನೆ ಪ್ರಾರಂಭಕ್ಕೆ ಕಾರಣ ಅದವರು ಎಂ.ಪಿ.ಪ್ರಕಾಶ. ವಿಜಯನಗರ ಉಕ್ಕು ಕಾರ್ಖಾನೆಗೆ ಸರ್ಕಾರ ತೋರಣಗಲ್ಲು ಕೃಷಿಕರ ಭೂಮಿಯನ್ನು ಸ್ವಾಧೀನಕ್ಕೆ ಪಡೆದಾಗ ಹೆಚ್ಚಿನ ಪರಿಹಾರ ನೀಡಲು ಪ್ರತ್ಯೇಕ್ಷವಾಗಿ-ಪರೋಕ್ಷವಾಗಿ ಹೋರಾಟ ನಡೆಸಿದ್ದರು. ಜಿಂದಾಲ್ ಸಂಸ್ಥೆಯು ಕೈಗಾರಿಕೆ ಸ್ಥಾಪಿಸಲು ಮುಂದಾದಾಗ ಸರ್ಕಾರದ ಮಟ್ಟದಲ್ಲಿನ ಎಲ್ಲಾ ಅನುಮತಿಗಳನ್ನು ಕೊಡಿಸಿ ಸ್ಥಳೀಯರ ಉದ್ಯೋಗಕ್ಕಾಗಿ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿದರು.

ರಾಜ್ಯ ಸರ್ಕಾರದಲ್ಲಿ ಹತ್ತು ಹಲವು ಖಾತೆಗಳನ್ನು ನಿರ್ವಹಿಸಿದ್ದ ಪ್ರಕಾಶ್‌ರವರು ಉಪಮುಖ್ಯಮಂತ್ರಿಯಾಗಿಯೂ ಕಾರ್ಯನಿರ್ವಹಿಸಿದರು. ಇವರು ಗೆಲವು ಸಾಧಿಸಿದಾಗಲೆಲ್ಲ ಪಕ್ಷ ಅಧಿಕಾರದಲ್ಲಿರುತ್ತಿದ್ದುದು ವಿಶೇಷ ಜನತಾ ಪರಿವಾರದ ಮೂಲಕ ಗುರುತಿಸಿಕೊಂಡ್ಡ ಪ್ರಕಾಶ್ ರವರು 2007ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು "ಚುನಾವಣೆ ಕುರಿತು ರಾಜಕಾರಣಿಗಳು ಚಿಂತಿಸುತ್ತಿದ್ದರೆ ಹೊಸ ಪೀಳಿಗೆಯ ಭವಿಷ್ಯ ಕುರಿತು ಮುತ್ಸದ್ದಿಗಳು ಚಿಂತನೆ ನಡೆಸುತ್ತಾರೆ ಎನ್ನುವುದಕ್ಕೆ ಎಂ.ಪಿ.ಪ್ರಕಾಶ್ ಅವರ ರಾಜಕೀಯ ಜೀವನ ಸಾಕ್ಷೀಕರಿಸುತ್ತದೆ.

ಹತ್ತು ಹಲವು ಮಾನವೀಯ ಗುಣಗಳ ಸಮನ್ವಯತೆ ಸಾದಿಸಿದ್ದ ಇವರು ಸಾಂಸ್ಕೃತಿಕ ಹಿನ್ನಲೆಯವರಾಗಿದ್ದು. ರಂಗಭಾರತಿ ಸ್ಥಾಪನೆ ಮೂಲಕ ತಮ್ಮ ರಾಜಕೀಯ ಕರ್ಮಭೂಮಿಯಾದ ಹೂವಿನಹಡಗಲಿಯಲ್ಲಿ ರಂಗಭೂಮಿ ಚಟುವಟಿಕೆಗಳನ್ನು ಜೀವಂತವಾಗಿಟ್ಟಿದ್ದರೂ ಜಿಲ್ಲಾ ಸಚಿವರಾಗಿದ್ದಾಗ ಬಳ್ಳಾರಿ ನಗರದಲ್ಲಿ ಅದ್ಭುತವಾದ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಾಣ ಮಾಡಿದ್ದು ಈ ಸಮುಚ್ಚಯಕ್ಕೆ ಎಂ.ಪಿ.ಪ್ರಕಾಶ್‌ರವರ ಹೆಸರನ್ನು ನಾಮಕರಣಗೊಳಿಸಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಉತ್ತರ:**

ಬಳ್ಳಾರಿ ನಗರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಿರ್ಮಿಸಲಾಗಿರುವ ಸಾಂಸ್ಕೃತಿಕ ಸಮುಚ್ಚಯದಲ್ಲಿ ಸಭಾಂಗಣ, ಕಲಾ ಪ್ರದರ್ಶನಾಲಯ, ಸಂಗೀತ ಮತ್ತು ಸಂಗೀತ ಗ್ರಂಥಾಲಯ, ಬಯಲು ರಂಗಮಂದಿರಗಳನ್ನು ಒಳಗೊಂಡಂತೆ 4 ಪಾರಂಪರಿಕ ಶೈಲಿಯ ಕಟ್ಟಡಗಳಿದ್ದು ಸದರಿ ಸಾಂಸ್ಕೃತಿಕ ಸಮುಚ್ಚಯವನ್ನು ಅಂದಿನ ಮುಖ್ಯಮಂತ್ರಿಗಳಾದ ದಿ|| ಜೆ.ಹೆಚ್. ಪಟೇಲ್ ರವರು ದಿನಾಂಕ: 05.01.1999 ರಲ್ಲಿ ಲೋಕಾರ್ಪಣೆ ಮಾಡಿರುತ್ತಾರೆ.

ಈ ಸಮುಚ್ಚಯದಲ್ಲಿ ನಾಡಿನ ಕಲೆ, ಸಂಸ್ಕೃತಿ, ರಂಗಭೂಮಿಯ ಚಟುವಟಿಕೆಗಳು ಮತ್ತು ರಾಷ್ಟ್ರ ಹಾಗೂ ರಾಜ್ಯಮಟ್ಟದ ವಿಚಾರ ಸಂಕಿರಣಗಳು ಜರುಗುತ್ತಿವೆ.

....2

ಬಳ್ಳಾರಿ ನಗರದಲ್ಲಿರುವ ಸಾಂಸ್ಕೃತಿಕ ಸಮುಚ್ಚಯಕ್ಕೆ ದಿ|| ಎಂ. ಪಿ. ಪ್ರಕಾಶ್ ಇವರ ಹೆಸರನ್ನು ನಾಮಕರಣ ಮಾಡುವ ಕುರಿತು ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿದ್ದು, ಜಿಲ್ಲಾಡಳಿತದಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಈ ಕುರಿತು ಪರಿಶೀಲಿಸಲಾಗುವುದು.

ಸಂಖ್ಯೆ: ಕಸಂವಾ 80 ಕವಿಸ 2024.

**(ಶಿವರಾಜ ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.